# ಕರ್ನಾಟಕ ಸರ್ಕಾರ

ಸಂ.ಬಿಡಿಎ:ಎಎಲ್ಎನ್:ಎಸ್ಆರ್(ಎಸ್):169:2000-01.

ಜಿಲ್ಲಾಧಿಕಾರಿಗಳವರ ಕಾರ್ಯಾಲಯ,
ಬೆಂಗಳೂರು ಜಿಲ್ಲೆ,
ಬೆಂಗಳೂರು, ದಿನಾಂಕ: 17-12-2002.
24

## ಅಧಿಕೃತ ಜ್ಞಾಪನ

ವಿಷಯ: ಬೆಂಗಳೂರು ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಹಲಗೇವಡೇರಹಳ್ಳಿ ಗ್ರಾಮದ ಸರ್ವೆನಂ.244:1, 244:2 ಮತ್ತು 279:2 ರಲ್ಲಿ ಒಟ್ಟು 2-07½ ಗುಂಟೆ ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ಶ್ರೀ ಪಿ.ವಿ.ಶೆಟ್ಟಿ ಬಿನ್ ಲೇಟ್ ಪಿ.ಎನ್.ಶೆಟ್ಟಿ, ನಂ.44, 1ನೇ 'ಎ' ಮುಖ್ಯರಸ್ತೆ, ಆರ್.ಎಂ.ವಿ.ಬಡಾವಣೆ, ಬೆಂ-94 ರವರು ಸಲ್ಲಿಸಿರುವ ಅರ್ಜಿ ದಿ: 14-8-02.

ಉಲ್ಲೇಖ: 1) ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ಇವರ ವರದಿ ಸಂಖ್ಯೆ. ಎಎಲ್ಎನ್:ಎಸ್ಆರ್:41:2000-01, ದಿನಾಂಕ: 06-08-2002.

2) ಭೂ ಪರಿವರ್ತನೆ ಶುಲ್ಕ ರೂ.1,19,110-00, 0-19 ಗುಂಟೆ 'ಎ' ಖರಾಬ್ ಕಿಮ್ಮತ್ತು ರೂ.7,12,500-00, ಅನಧಿಕೃತ ಕಟ್ಟಡಗಳಿಗೆ ದಂಡ ರೂ.70,150-00 ಹಾಗೂ ಪೋಡಿ ಶುಲ್ಕ ರೂ.165-00 ಒಟ್ಟು ರೂ.9,01,925-00ಗಳನ್ನು ಚಲನ್ ನಂಬರ್. ಸಿವಿಪಿಎಸ್ 22, ದಿನಾಂಕ: 13-12-2002ರಂದು ಖಜಾನೆಗೆ ಅರ್ಜಿದಾರರು ಜಮಾ ಮಾಡಿರುತ್ತಾರೆ.

-::()::-

ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ.95(2), 95(4) ಮತ್ತು (95(7)ರ ಷರತ್ತುಗಳು ಹಾಗೂ ಷರತ್ತುಗೊಳಪಡಿಸಿ, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ನಿಯಮಗಳು 1994ರ ನಿಯಮ 107(1)ರಂತೆ ಎಕರೆ ಒಂದಕ್ಕೆ ರೂ.54,450-00 (ರೂಪಾಯಿಗಳು ಐವತ್ತನಾಲ್ಕು ಸಾವಿರದ ನಾಲ್ಕುನೂರ ಐವತ್ತು ಮಾತ್ರ)ಗಳಂತೆ ಅರ್ಜಿದಾರರು ಉಲ್ಲೇಖ (2)ರಲ್ಲಿ ನಮೂದಿಸಿರುವಂತೆ ಹಣವನ್ನು ಜಮಾ ಮಾಡಿದ ಮೇರೆಗೆ ಅರ್ಜಿದಾರರಾದ ಶ್ರೀ ಪಿ.ವಿ.ಶೆಟ್ಟಿ ಬಿನ್ ಲೇಟ್ ಪಿ.ಎನ್.ಶೆಟ್ಟಿ, ನಂ.44, 1ನೇ 'ಎ' ಮುಖ್ಯರಸ್ತೆ, ಆರ್.ಎಂ.ವಿ.ಬಡಾವಣೆ, ಬೆಂ-94 ರವರ ಅರ್ಜಿಯನ್ನು ಪರಿಗಣಿಸಿ ಕೆಂಗೇರಿ ಹೋಬಳಿ, ಹಲಗೇವಡೇರಹಳ್ಳಿ ಗ್ರಾಮದ ಸರ್ವೆನಂ.244:1, 244:2 ಮತ್ತು 279:2ರಲ್ಲಿನ ಒಟ್ಟು 2-07½ ಗುಂಟೆ ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಬಳಸಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಭೂ ಪರಿವರ್ತನಾ ಆದೇಶವನ್ನು ಹೊರಡಿಸಲಾಗಿದೆ.

1) ಈ ಭೂಮಿಯು ಯಾವ ಉದ್ದೇಶಕ್ಕಾಗಿ ಪರಿವರ್ತನೆಯಾಗಿದೆಯೋ ಆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಲು ಸಕ್ಷಮ ಪ್ರಾಧಿಕಾರಿಯಿಂದ ಅಂದರೆ ಅಭಿವೃದ್ಧಿ ಮಂಡಳಿ:ಸಿಎಂಸಿ:ಟಿಎಂಸಿ:ಮಾಲಿನ್ಯ ನಿಯಂತ್ರಣಾ ಮಂಡಳಿ:ಗ್ರಾಮ ಪಂಚಾಯಿತಿಗಳಿಂದ ಮಂಜೂರಾತಿಯನ್ನು ಪಡೆಯದ ಹೊರತು ಈ ಆದೇಶವು ಅನುಭವದಾರನಿಗೆ ಯಾವುದೇ ಹಕ್ಕನ್ನು ನೀಡುವುದಿಲ್ಲ.

2) ಈ ಪರಿವರ್ತಿತ ಜಮೀನನ್ನು ವಾಸದ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು. ಈ ಜಮೀನನ್ನು ಪೂರ್ವಾನುಮತಿ ಇಲ್ಲದೇ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು.

3) ಈ ಜಮೀನಿನಲ್ಲಿ ಉದ್ದೇಶಿಸಿರುವ ಬಡಾವಣೆ ನಕ್ಷೆ ಹಾಗೂ ಪರವಾನಗಿ ಇತ್ಯಾದಿಗಳನ್ನು ಅಭಿವೃದ್ಧಿ ಮಂಡಳಿ:ಸಿಎಂಸಿ:ಟಿಎಂಸಿ:ಮಾಲಿನ್ಯ ನಿಯಂತ್ರಣಾ ಮಂಡಳಿ:ಗ್ರಾಮ ಪಂಚಾಯಿತಿಗಳಿಂದ ಅನುಮೋದಿಸಿಕೊಂಡು ಆ ನಂತರ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡವನ್ನು ಕಟ್ಟುವುದು. ಸದರಿ ಜಮೀನಿನಲ್ಲಿ ಲೇಔಟ್ ಪ್ಲಾನಿಗೆ ಅನುಮೋದನೆ ಪಡೆಯದೆ ಪರಭಾರೆ ಮಾಡಕೂಡದು.

4) ಈ ಆದೇಶವು ಸದರಿ ಜಮೀನಿಗೆ ಸಂಬಂಧಪಟ್ಟಂತೆ ಯಾವುದೇ ನ್ಯಾಯಾಲಯದಲ್ಲಿನ ದಾವೆ : ರಿಟ್ ಅರ್ಜಿ : ಮೇಲ್ಮನವಿಯ ತೀರ್ಪಿಗೆ ಒಳಪಟ್ಟಿರುತ್ತದೆ.

5) ಇತರೆ ಅವಶ್ಯವಾದ ರಸ್ತೆ ಜಾಗ, ರಸ್ತೆ ಮಾರ್ಜಿನ್, ಖಾಲಿ ಜಾಗ ಇತ್ಯಾದಿಗಳನ್ನು ಅಭಿವೃದ್ಧಿ ಮಂಡಳಿ:ಸಿಎಂಸಿ:ಟಿಎಂಸಿ:ಮಾಲಿನ್ಯ ನಿಯಂತ್ರಣಾ ಮಂಡಳಿ:ಗ್ರಾಮ ಪಂಚಾಯಿತಿರವರಿಂದ ಅನುಮೋದಿಸಿದ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ದಿಷ್ಟಪಡಿಸಿದ ನಿಯಮಗಳ ರೀತ್ಯಾ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು.

6) ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಜಮೀನಿನಲ್ಲಿ ನಿವೇಶನದಾರರಿಗೆ ನಾಗರೀಕ ಸೌಲಭ್ಯಗಳಾದ ವಿದ್ಯುಚ್ಛಕ್ತಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯ ನೈರ್ಮಲೀಕರಣ ಹಾಗೂ ಭದ್ರತೆಗಳ ಉದ್ದೇಶದಿಂದ ಎಲ್ಲಾ ಸೌಲಭ್ಯಗಳನ್ನು ಕಾನೂನು ರೀತ್ಯಾ ಒದಗಿಸಿಕೊಡುವುದು ಅರ್ಜಿದಾರರ ಜವಾಬ್ದಾರಿಯಾಗಿರುತ್ತದೆ.

--- ಪು.ತಿ.ನೋ.)

(135 NPS-22

ಕೆ.ಆ.ನಮೂ. - 3

**ಕರ್ನಾಟಕ ಸರ್ಕಾರ**

ಮೂಲ ಪ್ರತಿ

ನಲ್ಲಿರುವ ...Bank ... ಬ್ಯಾಂಕ್/ಖಜಾನೆಯಲ್ಲಿ ಪಾವತಿಸಿದ ನಗದುಹಣದ ಚಲನ್

| ಖಜಾನೆ ಕೋಡು | ಡ್ರಾ.ಅ.ಕೋಡು | ದಿನಾಂಕ | ಚಲನ್ ನಂ. |
|---|---|---|---|
| 0 2 0 0 | | 4 12 02 | |

ಪಾವತಿದಾರನ ಹೆಸರು: P. V. ... S/o Late P. V. ...

ವಿಳಾಸ: No 44 ... A ... 

ಪಾವತಿಯ ಉದ್ದೇಶ: Being the Conversion charge

ಸರಿಯಾಗಿದೆ ಹಣ ಸ್ವೀಕರಿಸಿ

ಲೆಕ್ಕದ ಬಾಬಿನ ವಿವರ: S/NO 244/1 - 0.09
S/NO 244/1 - 0.10½
S/NO 23/2-1 - 28

LR 0029 00/01 003

ತಹಶೀಲ್ದಾರ್, ... ತಾಲ್ಲೂಕು

| ಪಾವತಿಯ ವಿವರ | ಲೆಕ್ಕ ಶೀರ್ಷಿಕೆ ಕೋಡ್ | ಮೊಬಲಗು ರೂ. |
|---|---|---|
| ೧) | 0029 00 101 003 | 119110 |
| ೨) | 0029 00 101 003 | 712500 |
| ೩) | 0029 00 101 003 | 70150 |
| ೪) | 0029 00 101 002 | 165 |
| ೫) | | |
| | ಒಟ್ಟು ಮೊತ್ತ | 901925 |

ಪದಗಳಲ್ಲಿ Nine lakh One thousand Nine hundred & twenty five ರೂಪಾಯಿಗಳು ಮಾತ್ರ

ತಾರೀಖು:

ಸ್ಥಳ:

ಪಾವತಿದಾರನ ಸಹಿ

RESERVE BANK OF INDIA, B'lore
नगद प्राप्त/CASH RECEIVED
13 DEC 2002
क्षेत्रीय निदेशक
P. Regional Director
कोषपाल
Treasurer

ರೂ. Rs. 901925/- (ಪದಗಳಲ್ಲಿ) ರೂಪಾಯಿಗಳು ಮಾತ್ರ ಸ್ವೀಕರಿಸಿದೆ.

ಖಜಾಂಚಿ ಲೆಕ್ಕಪಾಲ ಖಜಾನೆ/ಬ್ಯಾಂಕ್ ಅಧಿಕಾರಿ

Rs. Nine lakhs one thousand nine hundred & twenty five only

WD. ... -GTBPM-10,000 pads of 100 sheets ... -8-98

... By ...
Applied On 28/1/16
... Prepared By ...
... Compared by ...
... Ready On 02/02/16
... Delivered On 07/02/2016
S.A.R. No. 250 / 1976

"ಛಾಯಾಪ್ರತಿ"

ಜಿಲ್ಲಾಧಿಕಾರಿಗಳ ಕಛೇರಿ ...

(132)

## ಕರ್ನಾಟಕ ಸರ್ಕಾರ

ನಂ.ಎಎಲ್‌ಎನ್:ಎಸ್‌ಆರ್(ಎಸ್):೧೬೯:೨೦೦೦-೦೧.

ಜಿಲ್ಲಾಧಿಕಾರಿಗಳವರ ಕಾರ್ಯಾಲಯ,
ಬೆಂಗಳೂರು ಜಿಲ್ಲೆ,
ಬೆಂಗಳೂರು, ದಿನಾಂಕ: ೩೦-೧೧-೨೦೦೨.

:: ತಿಳುವಳಿಕೆ ಪತ್ರ ::

ವಿಷಯ: ಬೆಂಗಳೂರು ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಹಲಗೇವಡೇರಹಳ್ಳಿ ಗ್ರಾಮದ ಸರ್ವೆನಂಬರ್.೨೪೪:೧, ೨೪೪:೨ ಮತ್ತು ೨೬೯:೨ರಲ್ಲಿನ ಒಟ್ಟು ೨-೦೭½ ಗುಂಟೆ ವಿಸ್ತೀರ್ಣವನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಂಜೂರು ಮಾಡುವ ಬಗ್ಗೆ.

---

ನೀವು ದಿನಾಂಕ: ೧೪-೦೮-೨೦೦೨ರಂದು ಹಲಗೇವಡೇರಹಳ್ಳಿ ಗ್ರಾಮದ ಸರ್ವೆನಂಬರ್.೨೪೪:೧, ೨೪೪:೨ ಮತ್ತು ೨೬೯:೨ರಲ್ಲಿನ ಒಟ್ಟು ೨-೦೭½ ಗುಂಟೆ ವಿಸ್ತೀರ್ಣವನ್ನು ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ಸಲ್ಲಿಸಿರುವ ಅರ್ಜಿಯನ್ನು ಪರಿಶೀಲಿಸಿರುತ್ತದೆ. ಹಾಗೂ ಈ ಬಾಬ್ತು ಈ ಕೆಳಗೆ ನಮೂದಿಸಿರುವ ಭೂ ಪರಿವರ್ತನಾ ಶುಲ್ಕವನ್ನು ಮತ್ತು ಹೋಡಿ ಶುಲ್ಕವನ್ನು ಸರ್ಕಾರಕ್ಕೆ ಜಮಾ ಮಾಡಿ ಈ ತಿಳುವಳಿಕೆ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ರೂ.೧೦೦-೦೦ (ಒಂದು ನೂರು ರೂಪಾಯಿಗಳು ಮಾತ್ರ) ಛಾಪಾ ಕಾಗದದಲ್ಲಿ ಕರಾರು ಪತ್ರದೊಂದಿಗೆ ಚಲನ್ ೧೫ ದಿವಸ ದೊಳಗಾಗಿ ಹಾಜರುಪಡಿಸಿ ಭೂ ಪರಿವರ್ತನಾ ಮಂಜೂರಾತಿ ಆದೇಶವನ್ನು ಪಡೆಯತಕ್ಕದ್ದು.

ನಿಗಧಿಪಡಿಸಿದ ಅವಧಿಯಲ್ಲಿ ಭೂ ಪರಿವರ್ತನೆ ಶುಲ್ಕ ಪಾವತಿಸಿದ ಬಗ್ಗೆ ಚಲನ್ ಮತ್ತು ಕರಾರು ಪತ್ರವನ್ನು ಹಾಜರು ಪಡಿಸದಿದ್ದಲ್ಲಿ ನಿಮ್ಮ ಅರ್ಜಿಯನ್ನು ತಿರಸ್ಕರಿಸಲಾಗುವುದು.

| ಸರ್ವೆನಂಬರ್ | ವಿಸ್ತೀರ್ಣ ಎಕರೆ : ಗುಂಟೆ | ಹಣ ಪಾವತಿಯ ವಿವರ | ಮೊಬಲಗು ರೂ. ಪೈ. |
|---|---|---|---|
| ೨೪೪:೧ | ೦-೦೯ | ೧) ಭೂ ಪರಿವರ್ತನಾ ಶುಲ್ಕ ಎಕರೆ ಒಂದಕ್ಕೆ ರೂ.೫೪,೪೫೦-೦೦ರಂತೆ. | ೧,೧೯,೧೧೦-೦೦ |
| ೨೪೪:೨ | ೦-೧೦½ | ೨) ಸನಂ.೨೬೯:೨ರ ೦-೧೯ ಗುಂಟೆಗೆ ಖರಾಬ್ ಶುಲ್ಕ ಎಕರೆ ಒಂದಕ್ಕೆ ರೂ.೧೫೦೦೦೦೦ರ ಲಕ್ಷದಂತೆ. | ೪,೧೨,೫೦೦-೦೦ |
| ೨೬೯:೨ | ೧-೨೮ | | |
| ಒಟ್ಟು | 2-07½ | ೩) ಸನಂ.೨೪೪:೨ರಲ್ಲಿರುವ ೧೦ X ೧೦ ಚ.ಅ. ಕಾವಲುಗಾರರ ಶೆಡ್, ೧೨೦ X ೪೦ ಶೀಟಿನ ಶೆಡ್ ಮತ್ತು ಸನಂ.೨೪೪:೧ರಲ್ಲಿನ ೩೦ X ೪೦ ಚ.ಅಡಿಯಲ್ಲಿರುವ ಆರ್.ಸಿ.ಸಿ. ಅನಧಿಕೃತ ಕಟ್ಟಡಗಳಿಗೆ ದಂಡ ರೂ. | ೭೦,೧೫೦-೦೦ |
| | | ೪) ಪ್ರತಿ ಸನಂ.ಗೆ ಹೋಡಿ ಶುಲ್ಕ ರೂ.೫೫-೦೦ ರಂತೆ. | ೧೬೫-೦೦ |
| | | ಒಟ್ಟು | ೬,೦೧,೯೨೫-೦೦ |

(ರೂಪಾಯಿ ಅಕ್ಷರಗಳಲ್ಲಿ ಆರು ಲಕ್ಷದ ಒಂದು ಸಾವಿರದ ಒಂಭೈನೂರ ಇಪ್ಪತ್ತ ಐದು ಮಾತ್ರ)

By ...
Applied on 28/11/...
Prepared by ...
Compared by ...
Copy issued on 02/12/...

ಶ್ರೀ ಜಿ.ಪಿ.ಶೆಟ್ಟಿ ಬಿನ್ ...,
ನಂ.೪೪ ...,
ಆರ್.ಎಂ.ವಿ.ಬಡಾವಣೆ, ಬೆಂಗಳೂರು - ೯೪.

ವಿಶೇಷ ಜಿಲ್ಲಾಧಿಕಾರಿಗಳ ಪರವಾಗಿ,
ಬೆಂಗಳೂರು ಜಿಲ್ಲೆ, ಬೆಂಗಳೂರು
"ಛಾಯಪ್ರತಿ"
ಜಿಲ್ಲಾಧಿಕಾರಿಗಳ ಕಾರ್ಯಾಲಯ
ಬೆಂಗಳೂರು

ಪ್ರತಿಯನ್ನು ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ರವರಿಗೆ ಮುಂದಿನ ನಡವಳಿಕೆಗಾಗಿ ರವಾನಿಸಲಾಗಿದೆ.